ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 6 ರವರೆಗೆ

ಅಧ್ಯಕ್ಷರು : ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

4. ಶಾಸನಾತ್ಮಕ ನಿರ್ಣಯ

ವಿಷಯ : ಕರ್ನಾಟಕ ರಾಜ್ಯದ ಸರ್ಕಾರಿ ವೈದ್ಯರ, ಇಎಸ್‌ಐ, ಆಸ್ಪತ್ರೆಗಳ ವೈದ್ಯರ ಹಾಗೂ ಸಿಬ್ಬಂದಿ ವರ್ಗದ ಸ್ಯಾನಿಟೇಷನ್, ಮುನಿಸಿಪಲ್ ಸೇವೆಗಳು ಹಾಗೂ ವಾರ್ಡ್‌ನ್‌ಗಳು, ಅಡಿಗೆಯವರು ಮತ್ತು ಅಡಿಗೆ ಮನೆ ಸಿಬ್ಬಂದಿ ಮತ್ತು ಗ್ರೂಪ್ "ಡಿ" ನೌಕರರ ಸೇವೆಗಳನ್ನು ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ 1994ರ ಅಡಿಯಲ್ಲಿ ತರುವುದು.

ಶ್ರೀ ಟಿ.ಜಿ.ಆರ್. ಸಿಂಧ್ಯ(ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ಕರ್ನಾಟಕ ರಾಜ್ಯದ ಸರ್ಕಾರಿ ವೈದ್ಯರ, ಇಎಸ್‌ಐ, ಆಸ್ಪತ್ರೆಗಳ ವೈದ್ಯರ ಹಾಗೂ ಸಿಬ್ಬಂದಿ

ವರ್ಗದ ಸ್ಯಾನಿಟೇಷನ್, ಮುನಿಸಿಪಲ್ ಸೇವೆಗಳು ಹಾಗೂ ವಾರ್ಡ್‌ನ್‌ಗಳು, ಅಡಿಗೆಯವರು ಮತ್ತು ಅಡಿಗೆ ಮನೆ ಸಿಬ್ಬಂದಿ ಮತ್ತು ಗ್ರೂಪ್ "ಡಿ" ನೌಕರರ ಸೇವೆಗಳನ್ನು ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ 1994ರ ಅಡಿಯಲ್ಲಿ ತರುವುದು"

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ರಾಜ್ಯದ ಸರ್ಕಾರಿ ವೈದ್ಯರ, ಇಎಸ್‌ಐ, ಆಸ್ಪತ್ರೆಗಳ ವೈದ್ಯರ ಹಾಗೂ ಸಿಬ್ಬಂದಿ ವರ್ಗದ ಸ್ಯಾನಿಟೇಷನ್, ಮುನಿಸಿಪಲ್ ಸೇವೆಗಳು ಹಾಗೂ ವಾರ್ಡನ್‌ಗಳು, ಅಡಿಗೆಯವರು ಮತ್ತು ಅಡಿಗೆ ಮನೆ ಸಿಬ್ಬಂದಿ ಮತ್ತು ಗ್ರೂಪ್ "ಡಿ" ನೌಕರರ ಸೇವೆಗಳನ್ನು ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ 1994ರ ಅಡಿಯಲ್ಲಿ ತರುವುದು"

ಪ್ರಸ್ತಾಪ ಮಂಡಿಸಲಾಯಿತು

ಶ್ರೀ ಭೈರೇಗೌಡ. ಸಿ.: ಬಿಎಸಿ ಕಮಿಟಿಯಲ್ಲಿ ಏನು ಚರ್ಚೆಯಾಗಿ ತಾವು ಒಪ್ಪಿಕೊಂಡಿದ್ದೀರಿ, ಅದರಂತೆಯೇ ನಾವು ಇಲ್ಲಿ ತರುತ್ತಿರುವುದು, ದಯಮಾಡಿ ಇದನ್ನು ಪಾಸ್ ಮಾಡಿಕೊಡಬೇಕು.

ಅಧ್ಯಕ್ಷರು : ತಮ್ಮ ಸಲಹೆಯಂತೆ ಬಿಎಸಿ ಕಮಿಟಿಯಲ್ಲಿ ಬಿಡಿಎ ಬಿಲ್ ಬಗ್ಗೆ ಚರ್ಚೆ ಮಾಡಿ ಅದನ್ನು ಮಾಡಿಕೊಡೋಣ ಎಂದು ತಾವು ಹೇಳಿದಿರಿ, ಇದು ಅತ್ಯಾವಶ್ಯಕವಾಗಿ ಆಗಲೇ ಬೇಕಾದ ಬಿಲ್ ಆಗಿರುವುದರಿಂದ, ಬಿಎಸಿಯಲ್ಲಿ ತಮಗೆಲ್ಲಾ ಕ್ಲಾರಿಫಿಕೇಷನ್ ಕೊಟ್ಟು, even we had called the minister and also the BD chairman ಅವರು ಎಲ್ಲಾ ವಿವರಣೆ ಕೊಟ್ಟಿದ್ದಾರೆ. ನೀವು ಒಪ್ಪವುದಾದರೆ ಸ್ವಲ್ಪ ಸಮಯ ಸಭೆಯನ್ನು ಮುಂದಕ್ಕೆ ಹಾಕಿ ಊಟ ಮಾಡಿಕೊಂಡು ಬರೋಣ, ತಮ್ಮ ಧರಣಿ ಕೂಡ ಮುಕ್ತಾಯವಾಗಿರುತ್ತದೆ. ಇದರ ಬಗ್ಗೆ ಚರ್ಚೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ್ದು ಚರ್ಚೆಯಾಗಿರುವುದರಿಂದ ಇದನ್ನು ತೆಗೆದುಕೊಳ್ಳಬಹುದು ಏನೂ ತೊಂದರೆಯಿಲ್ಲ.

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ನೇರವಾಗಿ ಸೊಮೋಟೊ ಆಗಿ ಮಾಡವುದಕ್ಕೆ ಬರುವುದಿಲ್ಲ. ಇದಕ್ಕೆ ಸರ್ಕಾರ ಒಪ್ಪಬೇಕು.

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಸೂದೆಗೆ ಇವತ್ತೇ ಒಪ್ಪಿಗೆ ತೆಗೆದುಕೊಳ್ಳಬಹುದು. ಇದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಇದರ ಬಗ್ಗೆ ಹೌಸ್ ಕಮಿಟಿ ಮಾಡುವುದಕ್ಕೆ ಯೋಗ್ಯ ಇದೆಯೋ ಅಥವಾ ಇಲ್ಲವೋ ಎನ್ನುವುದಕ್ಕೆ ಎಲ್ಲಾ ರೆಕಾರ್ಡ್ಸ್ ತರಿಸಿ, ಎಲ್ಲರನ್ನೂ ಕರೆಸಿ, ನಿರ್ಧಾರ ಮಾಡಿದ ನಂತರ then you come to the conclusion.

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, I am overburdened with several things ನನಗೆ ಆ ಜವಾಬ್ದಾರಿ ಹಾಕಬೇಡಿ.